ಶ್ರೀ ಎಂ.ಎಸ್.ಆತ್ಮಾನಂದ್ (ಮಂಡ್ಯ) : ಮಾನ್ಯ ಅಧ್ಯಕ್ಷರೆ, ಕಾವೇರಿ ಜಲವಿವಾದದ ಸಂದರ್ಭದಲ್ಲಿ ನಡೆದ ಗಲಭೆಯಲ್ಲಿ ಮಂಡ್ಯ ನಗರ ಹಾಗೂ ಜಿಲ್ಲೆಯಲ್ಲಿ ಅನೇಕ ವ್ಯಕ್ತಿಗಳ ಹಾಗೂ ಸಂಘ ಸಂಸ್ಥೆಗಳ ಆಸ್ತಿಗೆ ಹಾನಿಯಾಗಿದೆ. ನಷ್ಟ ಹೊಂದಿದವರಿಗೆ ಮಂಡಳಿ ಜಿಲ್ಲಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಕೊಡಬಹುದಾದ ಪರಿಹಾರಧನವನ್ನು ಮಂಜೂರು ಮಾಡಿದ್ದಾರೆ. ತುಂಬಾ ನಷ್ಟಕ್ಕೊಳಗಾದ ವ್ಯಕ್ತಿಗಳಿಗೆ ಹೆಚ್ಚಿನ ಪರಿಹಾರಧನ ಮಂಜೂರಾತಿಗಾಗಿ ಸರ್ಕಾರಕ್ಕೆ ಈಗ್ಗೆ 7-8 ತಿಂಗಳ ಹಿಂದೆ ಪ್ರಸ್ತಾವನೆಯನ್ನು ಮಂಡ್ಯ ಜಿಲ್ಲಾಧಿಕಾರಿಗಳು ಕಳುಹಿಸಿದ್ದಾರೆ. ಇದೇ ಅಲ್ಲದೆ ಗಲಭೆಯ ಸಂದರ್ಭದಲ್ಲಿ ನಷ್ಟ ಹೊಂದಿದ ಸಣ್ಣ ಕೈಗಾರಿಕೋದ್ಯಮಿಗಳು ಬಡ್ಡಿ ರಹಿತ ಸಾಲಕ್ಕಾಗಿ ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಈ ಮನವಿಯ ಬಗ್ಗೆ ಯಾವುದೇ ಕ್ರಮವನ್ನೂ ತೆಗೆದುಕೊಂಡಿರುವುದಿಲ್ಲ. ಗಲಭೆಯ ಸಂದರ್ಭದಲ್ಲಿ ನಷ್ಟಕ್ಕೊಳಗಾದವರಿಗೆ ಪರಿಹಾರಧನವನ್ನು ಹಾಗೂ ಆ ಉದ್ಯಮಿಗಳಿಗೆ ಬಡ್ಡಿ ರಹಿತ ಸಾಲವನ್ನೂ ಶೀಘ್ರವಾಗಿ ಮಂಜೂರಾತಿ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಕಾವೇರಿ ಜಲವಿವಾದ ಸಂಬಂಧ 1991 ರ ಡಿಸೆಂಬರ್‌ನಲ್ಲಿ ರಾಜ್ಯದಲ್ಲಿ ನಡೆದ ಚಳುವಳಿಯಲ್ಲಿ ಮಂಡ್ಯ, ಮೈಸೂರು ಹಾಗೂ ಬೆಂಗಳೂರು ನಗರ ವ್ಯಾಪ್ತಿಯ ಪ್ರದೇಶದಲ್ಲಿ ಹಿಂಸಾಕೃತ್ಯಗಳು ನಡೆದು, ಗಲಭೆಯ ಸಂತಸ್ತರಿಗೆ ಸೂಕ್ತ ಪರಿಹಾರ ನೀಡಲು ಸರ್ಕಾರವು ದಿನಾಂಕ : 17 ನೇ ಡಿಸೆಂಬರ್ 1991 ರಂದು ಹೆಚ್.ಡಿ. 810 ಎಸ್‌ಎಸ್‌ಬಿ 91 ಆದೇಶವನ್ನು ಹೊರಡಿಸಿ, ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಿ, ಸಂತ್ರಸ್ತರಿಗೆ ಶೀಘ್ರ ಪರಿಹಾರ ನೀಡಲು ಆದೇಶಿಸಲಾಯಿತು.

ಆದರಂತೆ, ಮಂಡ್ಯ ಜಿಲ್ಲಾಧಿಕಾರಿಗಳು ಹಾಲಿ ಆದೇಶಗಳನ್ವಯ ಅರ್ಹ ಪ್ರಕರಣಗಳನ್ನು ಪರಿಶೀಲಿಸಿ ಸೂಕ್ತ ಪರಿಹಾರ ನೀಡಿರುತ್ತಾರೆ. ಅಲ್ಲದೆ ಮೂರು ಪ್ರಕರಣಗಳಲ್ಲಿ ಹೆಚ್ಚಿನ ಪರಿಹಾರ ನೀಡುವಂತೆ ಮಂಡ್ಯ ಜಿಲ್ಲಾಧಿಕಾರಿಗಳಿಂದ ಸರ್ಕಾರಕ್ಕೆ ಪ್ರಸ್ತಾವನೆ ಬಂದವುಗಳಲ್ಲಿ, ಅವುಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಎರಡು ಅರ್ಹ ಪ್ರಕರಣಗಳನ್ನು ಪರಿಗಣಿಸಿ ನಷ್ಟದ ಶೇಕಡಾ 50 ಭಾಗ ಹೆಚ್ಚಿನ ಪರಿಹಾರಧನವನ್ನು ನೀಡಲಾಯಿತು.

ಮಂಡ್ಯ ಜಿಲ್ಲಾಧಿಕಾರಿಗಳು 14 ಪ್ರಕರಣಗಳಲ್ಲಿ ಬಡ್ಡಿ ರಹಿತ ಸಾಲ ನೀಡಲು ಶಿಫಾರಸ್ಸು ಮಾಡಿದ್ದರು. ಆದರ, ಮಂಡ್ಯ ಜಿಲ್ಲೆಯಲ್ಲಿ ಹಾನಿಗೊಳಗಾದವರಿಗೆ ಮೇಲೆ ಉಲ್ಲೇಖಿಸಿದ ಸರ್ಕಾರಿ ಆದೇಶದ ಮೇರೆಗೆ ಪರಿಹಾರ ನೀಡಲಾಗುವುದರಿಂದ ಮತ್ತು ಹೆಚ್ಚಿನ ಹಾನಿಯಾದ 2 ಪ್ರಕರಣಗಳಲ್ಲಿ ವಿಶೇಷ ಪರಿಹಾರ ನೀಡಿರುವುದರಿಂದ ಬಡ್ಡಿ ರಹಿತ ಸಾಲ ಮಂಜೂರು ಮಾಡದಿರಲು ನಿರ್ಧರಿಸಲಾಗಿದೆ.

ಸದರಿ ಗಲಭೆಯಲ್ಲಿ ನಷ್ಟ ಅನುಭವಿಸಿದ ಕೈಗಾರಿಕಾ ಘಟಕಗಳಿಗೆ ಸರ್ಕಾರವು ವಿವಿಧ ರೀತಿಯ ಪರಿಹಾರ ಸೌಲಭ್ಯಗಳನ್ನು ಆದೇಶ ಸಂಖ್ಯೆ : ಸಿಐ. 26 ಎಸ್‌ಪಿಸಿ 92, ದಿನಾಂಕ : 31-1-1992 ರ ಪ್ರಕಾರ ಒದಗಿಸಿದೆ. ಆದರಂತೆ, ನಷ್ಟ ಅನುಭವಿಸಿದ ಕೈಗಾರಿಕಾ ಘಟಕಗಳು ಪಡೆದ ಸಾಲದ ಮೇಲಿನ ಶೇಕಡಾ 50 ರಷ್ಟು ಬಡ್ಡಿಯನ್ನು ಸಹಾಯಧನ ರೂಪದಲ್ಲಿ ನೀಡುವುದು, ಹೊಸ ಅವಧಿ ಸಾಲಗಳಿಗೆ ಹಣಕಾಸುಸಂಸ್ಥೆ ಅಥವಾ ಬ್ಯಾಂಕ್ ನೀಡುವ ಶೇಕಡಾ 2 ರ ಬಡ್ಡಿಗೆ ಸಮಾನಾಂತರ ಸಹಾಯಧನ ನೀಡುವುದು. ಹಾಗೂ ಶೇಕಡಾ 100 ರಷ್ಟು ಮಾರಾಟ ತೆರಿಗೆ ವಿನಾಯಿತಿಯನ್ನು ಗರಿಷ್ಠ 5 ವರ್ಷಗಳವರೆಗೆ ನೀಡುವುದು ಇತ್ಯಾದಿ ಸೌಲಭ್ಯಗಳನ್ನು ಸದರಿ ಆದೇಶದಲ್ಲಿ ನೀಡಲಾಗಿದೆ.

5. ಚಿಕ್ಕ ನಾಯಕನ ಹಳ್ಳಿ ತಾಲ್ಲೂಕು ನುಲೇನೂರು ಗ್ರಾಮದ ಸ.ನಂ. 27ರ ಕುರಿತು.

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೆ, ಚಿಕ್ಕನಾಯಕನ ಹಳ್ಳಿ

ತಾಲ್ಲೂಕು ನುಲೇನೂರು ಗ್ರಾಮದ ಸರ್ವೆ ನಂ. 27 ರಲ್ಲಿ ಈ ಹಿಂದೆ ಗೋಡಂಬಿ ಗಿಡ ಬೆಳೆಸಲು ದರ್ಖಾಸ್ತು ಮೂಲಕ ಮಂಜೂರಾಗಿದ್ದು ನಿಬಂಧನೆಯನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಮಂಜೂರಾತಿಯನ್ನು ಸರ್ಕಾರ ವಜಾ ಮಾಡಿದ್ದು ಮತ್ತು ಸರ್ಕಾರದ ಆದೇಶವನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು ಅದು ಅಂತಿಮವಾಗಿ ತೀರ್ಮಾನವಾಗಿರುವುದು ತಿಳಿದುಬಂದಿರುತ್ತದೆ. ಆದರೆ ಅದೇ ಜಮೀನಿನಲ್ಲಿ ಬಡಜನರು ಅನೇಕ ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದು ಜಮೀನು ಮಂಜೂರಾತಿಗಾಗಿ ಅರ್ಜಿದಾರರು ಒತ್ತಾಯಿಸುತ್ತಿದ್ದಾರೆ. ಈಗ ಆ ಜಮೀನಿನ ಪರಿಸ್ಥಿತಿ ಏನು? ಬಡ ಜನರಿಗೆ ಅದನ್ನು ಮಂಜೂರಾತಿ ಮಾಡಬಹುದೇ? ಅದರ ಕಡತ ಯಾವ ಕಛೇರಿಯಲ್ಲಿ ಅಡಕವಾಗಿದೆ ಎಂಬುದನ್ನು ತಿಳಿಸುವಂತೆ ಮಾನ್ಯ ಕಂದಾಯ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಸಚಿವರು), ಕಂದಾಯ ಮಂತ್ರಿಗಳ ಪರವಾಗಿ : ಮಾನ್ಯ ಅಧ್ಯಕ್ಷರೆ, 1964 ನೇ ಇಸವಿಯಲ್ಲಿ, ತುಮಕೂರು ಜಿಲ್ಲೆ, ಚಿಕ್ಕನಾಯಕನ ಹಳ್ಳಿ ತಾಲೂಕು ಹುಲಿಯೂರು ಹೋಬಳಿ ನುಲೇನೂರು ಗ್ರಾಮದ ಸ.ನಂ. 27 ರಲ್ಲಿ 6 ಜನರಿಗೆ ಸರ್ಕಾರ ಜಮೀನು ಮಂಜೂರು ಮಾಡಿರುತ್ತೆ. 1966 ನೇ ಇಸವಿಯಲ್ಲಿ, ಇದೇ ಸ.ನಂ. ನಲ್ಲಿ ಸರ್ಕಾರವು ಇನ್ನಿಬ್ಬರಿಗೆ ಜಮೀನು ಮಂಜೂರೂ ಮಾಡಿರುತ್ತೆ. ಆದುದರಿಂದ ಸ.ನಂ. 27 ರಲ್ಲಿ ಒಟ್ಟು 8 ಜನರಿಗೆ ಗೋಡಂಬಿ ಸಾಗುವಳಿಗೆ ಜಮೀನು ಮಂಜೂರು ಮಾಡಿ, ಸದರಿ ಜಮೀನನ್ನು 5 ವರ್ಷಗಳ ಒಳಗೆ ಗೋಡಂಬಿ ಸಾಗುವಳಿಗೆ ತರಬೇಕೆಂದು ಷರತ್ತು ವಿಧಿಸಿರುತ್ತೆ. ಆದಾಗ್ಯೂ, ಮಂಜೂರಿದಾರರು ಸದರಿ ಜಮೀನನ್ನು ಗೋಡಂಬಿ, ಸಾಗುವಳಿಗೆ ತರಲಿಲ್ಲವಾದ್ದರಿಂದ, ದಿನಾಂಕ 21-9-78 ರಂದು ಸರ್ಕಾರ ಎಲ್ಲಾ 8 ಜನರಿಗೆ ಮಾಡಿದ್ದ ಜಮೀನಿನ ಮಂಜೂರಾತಿ ರದ್ದು ಮಾಡಿರುತ್ತೆ.

ಮೇಲ್ಕಂಡ 8 ಜನರ ಪೈಕಿ ಮೂವರು ಸರ್ಕಾರದ ಸದರಿ ಜಮೀನಿನ ಮಂಜೂರಾತಿ ರದ್ದತಿ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಅಲಾಯಿದ ರಿಟ್ ಪಿಟಿಷನ್‌ಗಳನ್ನು ಸಲ್ಲಿಸಿದ್ದರು. ಈ ಎಲ್ಲಾ ಮೂರು ರಿಟ್ ಪಿಟಿಷನ್‌ಗಳಲ್ಲಿ ಉಚ್ಚನ್ಯಾಯಾಲಯವು ಆದೇಶ ಮಾಡಿ ಸದರಿ ಸರ್ಕಾರಿ ಆದೇಶವನ್ನು ಅನೂರ್ಜಿತಗೊಳಿಸಿ, ಹಿಂದಿನ ಸ್ಥಿತಿಯಂತೆ ನಡುವಳಿಗಳನ್ನು ನಡೆಸಿ, ಕಾನೂನು ರೀತ್ಯಾ ಸದರಿ ವಿಷಯವನ್ನು ವಿಲ್ ಮಾಡಬೇಕೆಂದು ನಿರ್ದೇಶನ ನೀಡಿರುತ್ತೆ.

ಉಚ್ಚ ನ್ಯಾಯಾಲಯದ ಆದೇಶದಂತೆ, ಸರ್ಕಾರವು ಈ ಪ್ರಕರಣವನ್ನು ಹಿಂದಿನ ನಡವಳಿಗಳ ಸ್ಥಿತಿಗೆ ತಂದು ಸದರಿ ವಿಷಯವನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ. ಈ ವಿಷಯದಲ್ಲಿ ಸೂಕ್ತ ಆದೇಶವನ್ನು ಇನ್ನು ಸ್ವಲ್ಪ ಕಾಲದಲ್ಲಿ ಹೊರಡಿಸಲಾಗುವುದು.

12.45 ಪಿ.ಎಂ.

6. ಮೇಲುಕೋಟೆಯನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿ.

ಶ್ರೀ ಜಿ. ಪುಟ್ಟ ಸ್ವಾಮಿ ಗೌಡ (ಹೊಳೀನರಸೀಪುರ) : ಮಾನ್ಯ ಸಭಾಧಕ್ಷರೆ, ರಾಜ್ಯದ ಪ್ರವಾಸೋದ್ಯಮ ಇಲಾಖೆಯು ಮೇಲುಕೋಟೆಯನ್ನು ಪ್ರವಾಸಿ ಕೇಂದ್ರವೆಂದು ಗುರುತಿಸಿದ್ದು, ಅದರ ಅಭಿವೃದ್ಧಿಗಾಗಿ ಈವರೆಗೆ ಯಾವುದೇ ಹಣವನ್ನು ಖರ್ಚುಮಾಡಿರುವುದಿಲ್ಲ. ಇಲ್ಲಿ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಯಾವುದೇ ಒಳ್ಳೆಯ ಹೋಟೆಲ್ ಮತ್ತು ಇತರ ಸೌಲಭ್ಯಗಳು ಇರುವುದಿಲ್ಲ. ಬೆಂಗಳೂರಿನಿಂದ ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ವ್ಯವಸ್ಥಿತ ಪ್ರವಾಸವನ್ನೂ ಸಹ ಏರ್ಪಡಿಸಿರುವುದಿಲ್ಲ. ಮೇಲುಕೋಟೆಯನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಕೇಂದ್ರ ಪ್ರವಾಸೋದ್ಯಮ ಇಲಾಖೆಯಿಂದ ಹಣದ ನೆರವನ್ನು ಪಡೆಯಲು ಸಾಧ್ಯವಿದೆ. ಆದ್ದರಿಂದ